# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕೋವಿಡ್-19 ರ ಹಿನ್ನೆಲೆಯಲ್ಲಿ ಅಗಸ ಹಾಗೂ ಕ್ಷೌರಿಕ ವೃತ್ತಿಯಲ್ಲಿ ತೊಡಗಿರುವ ಅಸಂಘಟಿತ ವಲಯದ ಕಾರ್ಮಿಕರಿಗೆ ಒಂದು ಬಾರಿ ಪರಿಹಾರಧನವಾಗಿ ರೂ. 5,000/-ಗಳ ನೆರವು ನೀಡುವ ಕುರಿತು ಎಸ್.ಒ.ಪಿ (S.O.P) ರಚನೆಯ ಬಗ್ಗೆ ಪರಿಷ್ಕೃತ ಆದೇಶ.

**ಓದಲಾಗಿದೆ:** (1) ಕೋವಿಡ್-19ಗೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 06-05-2020ರಂದು ಪತ್ರಿಕಾ ಘೋಷ್ಠಿಯಲ್ಲಿ ಘೋಷಿಸಿರುವ ಪರಿಹಾರ ಘೋಷಣೆ.

(2) ಸರ್ಕಾರದ ಕಾರ್ಯದರ್ಶಿ (ಆ&ಸಂ), ಆರ್ಥಿಕ ಇಲಾಖೆ ಇವರ ಟಿಪ್ಪಣಿ ಸಂಖ್ಯೆ:ಆಇ 08 ಉಕಾ (ಆ ಮತ್ತು ಸಂ)/2020, ದಿನಾಂಕ: 06-05-2020.

(3) ಜಂಟಿ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಇವರ ಪ್ರಸ್ತಾವನೆ ಸಂಖ್ಯೆ ಅಸಂಕಾ/ಇ.ಎಸ್.ಟಿ/ಸಿ.ಆರ್-4/2020-21, ದಿನಾಂಕ: 06-05-2020

(4) ಜಂಟಿ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಇವರ ಪರಿಷ್ಕೃತ ಪ್ರಸ್ತಾವನೆ ಸಂಖ್ಯೆ ಅಸಂಕಾ/ಇ.ಎಸ್.ಟಿ/ಸಿ.ಆರ್-4/2020-21, ದಿನಾಂಕ: 13-05-2020

(5) ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ 136 ವೆಚ್ಚ 9 2020, ದಿನಾಂಕ: 21-05-2020.

(6) ಸರ್ಕಾರಿ ಆದೇಶ ಸಂಖ್ಯೆ: ಕಾಇ 153 ಎಲ್‌ಇಟಿ 2020 (ಭಾಗ-1), ದಿನಾಂಕ 28-05-2020.

(7) ಜಂಟಿ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಇವರ ಪರಿಷ್ಕೃತ ಪ್ರಸ್ತಾವನೆ ಸಂಖ್ಯೆ ಅಸಂಕಾ/ಇ.ಎಸ್.ಟಿ/ಸಿ.ಆರ್-4/2020-21, ದಿನಾಂಕ: 04-06-2020

*******

ಪ್ರಸ್ತಾವನೆ:

ಮೇಲೆ ಓದಲಾದ (1)ರಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರ ಘೋಷಣೆಯಂತೆ, ಕೋವಿಡ್-19 ರ ಲಾಕ್‌ಡೌನ್ ಹಿನ್ನೆಲೆಯಲ್ಲಿ ದೈನಂದಿನ ಉದ್ಯೋಗವನ್ನು ನಡೆಸಲಾಗದೆ ಆದಾಯವನ್ನು ಕಳೆದುಕೊಂಡಿರುವ ಅಗಸ ಹಾಗೂ ಕ್ಷೌರಿಕ ವೃತ್ತಿಯಲ್ಲಿ ತೊಡಗಿರುವ ಅಸಂಘಟಿತ ವಲಯದ ಕಾರ್ಮಿಕರಿಗೆ ಒಂದು ಬಾರಿ ಪರಿಹಾರವಾಗಿ ತಲಾ ರೂ.5,000/- ಗಳ ನೆರವನ್ನು ಮೇಲೆ ಓದಲಾದ ಕ್ರ. ಸಂ. (6)ರ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧ-1 ರಲ್ಲಿನ ಷರತ್ತು ಮತ್ತು ಅನುಬಂಧ-2 ರಲ್ಲಿರುವ ಮಾರ್ಗಸೂಚಿಗೊಳಪಟ್ಟು ಹೊರಡಿಸಲಾಗಿರುತ್ತದೆ.

ಸದರಿ ಆದೇಶದ ಅನುಬಂಧ-2ರಲ್ಲಿ ಆದೇಶದ ಜಾರಿಗಾಗಿ ಕೈಗೊಳ್ಳಬೇಕಾದ ಕ್ರಮದ ಪ್ರಮಾಣಿತ ಕಾರ್ಯಾಚರಣಾ ವಿಧಾನದ(SOP) ಕುರಿತು ವಿವರಣೆಗಳನ್ನು ನೀಡಲಾಗಿದ್ದು, ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿಗಳನ್ನು ಪಡೆಯುವ ಕುರಿತು ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿ ಅಳವಡಿಸಿಕೊಳ್ಳಲು ಇ-ಆಡಳಿತ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಇವರೊಂದಿಗೆ ಚರ್ಚಿಸಲಾಗಿರುತ್ತದೆ. ಅವರ ಸಲಹೆಯಂತೆ,

Scanned with CamSca

ಈಗಾಗಲೇ ಅನುಮೋದಿತ SOP ಯನ್ನು ಆಧಾರವಾಗಿಟ್ಟುಕೊಂಡು ಪೋರ್ಟಲ್ ಅನ್ನು ಸಿದ್ದಪಡಿಸಲು ತೊಂದರೆಯಾಗುವುದೆಂದು ತಿಳಿಸುತ್ತಾ, SOP ಅನ್ನು ಸ್ವಲ್ಪ ಮಟ್ಟಿಗೆ ಸರಳಗೊಳಿಸಿ ಜಾರಿ ಮಾಡುವಂತೆ ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಯೋಜನೆಯ ಸುಸೂತ್ರ ಜಾರಿಗಾಗಿ ಸರಳಗೊಳಿಸಿದ ಪರಿಷ್ಕೃತ SOP ಯನ್ನು ಮೇಲೆ ಓದಲಾದ ಕ್ರಸಂ. (7)ರನ್ವಯ ಜಂಟಿ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಇವರು ಸಲ್ಲಿಸಿರುತ್ತಾರೆ.

ಈ ಮೇಲಿನ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಾಇ 153 ಎಲ್ಇಟಿ 2020 (ಭಾಗ-1), ಬೆಂಗಳೂರು, ದಿನಾಂಕ 16.06.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ವಯ ಮೇಲೆ ಓದಲಾದ ಕ್ರಸಂ. (6)ರ ಸರ್ಕಾರದ ಆದೇಶವನ್ನು ಅನುಬಂಧ-2 ರೊಂದಿಗೆ ಹೊರಡಿಸಿರುವ ಎಸ್.ಓ.ಪಿ ಬದಲಾಗಿ ಲಗತ್ತಿಸಿರುವ "ಪರಿಷ್ಕೃತ ಅನುಬಂಧ-2" ರನ್ವಯ ಯೋಜನೆಯ ಯಶಸ್ವಿ ಜಾರಿಗಾಗಿ ಕ್ರಮಕೈಗೊಳ್ಳುವಂತೆ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಈ ಉದ್ದೇಶಕ್ಕಾಗಿ ಪ್ರತ್ಯೇಕವಾಗಿ ಬ್ಯಾಂಕ್ ಖಾತೆ ತೆಗೆದು, ಇ-ಆಡಳಿತ ಇಲಾಖೆಯ ಪೋರ್ಟಲ್ ಮೂಲಕ ಆಧಾರ್ ಆಧಾರಿತ ಡಿಬಿಟಿ ಮೂಲಕ ಫಲಾನುಭವಿಗಳಿಗೆ ಪರಿಹಾರ ಧನ ವಿತರಿಸುವಂತೆ ತಿಳಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ನೀಡಿರುವ ಟಿಪ್ಪಣಿ ಸಂಖ್ಯೆ ಎಫ್‌ಡಿ 178 ವೆಚ್ಚ 9/2020 ದಿನಾಂಕ 12.06.2020 ಹಾಗೂ ಅನಧಿಕೃತ ಟಿಪ್ಪಣಿ ಸಂಖ್ಯೆ ಆಇ 178 ವೆಚ್ಚ-9/2020 ದಿನಾಂಕ 15.06.2020 ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

[ ಕೆ. ಪದ್ಮಿನಿ ದೇವಿ ],
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ.

**ಇವರಿಗೆ,**
**ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು**

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು, (ಎ & ಇ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂ:5398, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು,
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು,

Scanned with CamSca

4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿ.ಅ.ಸು.ಇ. ಇಲಾಖೆ, (ಇ-ಆಡಳಿತ) ಬಹುಮಹಡಿ ಕಟ್ಟಡ, ಬೆಂಗಳೂರು,
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು,
7. ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು
8. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
9. ಆಯುಕ್ತರು, ಬಿ.ಬಿ.ಎಂ.ಪಿ.
10. ಆಯುಕ್ತರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು,
11. ಆಯುಕ್ತರು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು,
12. ಆಯುಕ್ತರು, ಕಾರ್ಮಿಕ ಇಲಾಖೆ, ಬೆಂಗಳೂರು,
13. ಆಯುಕ್ತರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಬೆಂಗಳೂರು
14. ಆಯುಕ್ತರು, ಖಜಾನೆ-2, ಗಾಂಧಿನಗರ, ಬೆಂಗಳೂರು-500009
15. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು
16. ಎಲ್ಲಾ ಜಿಲ್ಲೆಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು
17. ಜಂಟಿ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ, ಬೆಂಗಳೂರು

ಪ್ರತಿಯನ್ನು ಮಾಹಿತಿಗಾಗಿ:-

1. ಮಾನ್ಯ ಮುಖ್ಯ ಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2. ಮಾನ್ಯ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು, ವಿಧಾನ ಸೌಧ, ಬೆಂಗಳೂರು
3. ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಖಾತೆ, ಸಚಿವರು, ಆಪ್ತ ಕಾರ್ಯದರ್ಶಿಯವರು,
4. ಹೆಚ್ಚುವರಿ ಪ್ರತಿಗಳು/ಶಾಖಾ ರಕ್ಷಾ ಕಡತ/ಒಡಿಜಿಸಿ

Scanned with CamSca

**ಸರ್ಕಾರಿ ಆದೇಶ ಸಂಖ್ಯೆ:ಕಾಇ 153 ಎಲ್‌ಇಟಿ 2020 (ಭಾಗ-1), ದಿನಾಂಕ: 16-06-2020ರ ಆದೇಶಕ್ಕೆ ಪರಿಷ್ಕೃತ ಅನುಬಂಧ-2**

**ಕೋವಿಡ್-19ರ ಕಾರಣ ಲಾಕ್ ಡೌನ್ ಜಾರಿಗೊಳಿಸಿದ ಹಿನ್ನೆಲೆಯಲ್ಲಿ, ಅಗಸರು ಹಾಗೂ ಕ್ಷೌರಿಕ ವೃತ್ತಿಯಲ್ಲಿ ತೊಡಗಿರುವ ಅಸಂಘಟಿತ ವಲಯದ ಕಾರ್ಮಿಕರಿಗೆ ಒಂದು ಬಾರಿ ಪರಿಹಾರವಾಗಿ ರೂ.5000/ಗಳ ನೆರವನ್ನು ಪಡೆಯಲು ಕೈಗೊಳ್ಳಬೇಕಾದ ಕ್ರಮದ ಕುರಿತು ಪರಿಷ್ಕೃತ ಮಾರ್ಗಸೂಚಿ (SOP).**

**I. ಅರ್ಜಿ ಸಲ್ಲಿಸುವ ಕುರಿತು:**

ಅರ್ಹ ಫಲಾನುಭವಿಗಳು ತಾವು ಕೆಲಸ ನಿರ್ವಹಿಸುತ್ತಿರುವ ವ್ಯಾಪ್ತಿಯ ಸೇವಾಸಿಂಧು ಕೇಂದ್ರಗಳಲ್ಲಿ ಸೇವಾಸಿಂಧು ಪೋರ್ಟಲ್‌ನಲ್ಲಿ ನಿಗದಿಪಡಿಸಿದ ಅರ್ಜಿ ನಮೂನೆಯಲ್ಲಿ ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸುವುದು:

a. ನಿಗದಿತ ಅರ್ಜಿ ನಮೂನೆಯಲ್ಲಿ ಮಾಹಿತಿಯನ್ನು ಭರ್ತಿ ಮಾಡುವುದು.

b. ಆಧಾರ್ ಕಾರ್ಡ್. (ಬ್ಯಾಂಕ್ ಖಾತೆಯೊಂದಿಗೆ ಜೋಡಣೆಯಾಗಿರುವುದು ಕಡ್ಡಾಯ).

c. ವಿಳಾಸ ದೃಢೀಕರಣ ಪತ್ರ (ಚುನಾವಣಾ ಗುರುತಿನ ಚೀಟಿ/ಚಾಲನಾ ಪರವಾನಗಿ/ಪಡಿತರ ಚೀಟಿ)

d. ಮೊಬೈಲ್ ಸಂಖ್ಯೆ (ಕಡ್ಡಾಯವಾಗಿ ನಮೂದಿಸುವುದು)

e. ಸ್ವಯಂ ಘೋಷಣೆ

f. ಅರ್ಜಿದಾರರು ಅಗಸರು/ಕ್ಷೌರಿಕ ವೃತ್ತಿಯನ್ನು ನಿರ್ವಹಿಸುತ್ತಿರುವ ಕುರಿತು ಉದ್ಯೋಗ ಪ್ರಮಾಣ ಪತ್ರ (ಕೆಳಕಂಡ ಯಾವುದಾದರೊಂದು ಅಧಿಕಾರಿಯಿಂದ ದೃಢೀಕರಿಸಲ್ಪಟ್ಟಿರುವುದು). (ಮೂಲ ಪ್ರತಿಯನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡುವುದು).

1. ಬಿ.ಬಿ.ಎಂ.ಪಿ ವ್ಯಾಪ್ತಿಯ ವಾರ್ಡ್‌ಗಳ ಮಟ್ಟದಲ್ಲಿನ ಕಂದಾಯ ಅಧಿಕಾರಿ/ ಕಂದಾಯ ನಿರೀಕ್ಷಕರು / ಹಿರಿಯ ಆರೋಗ್ಯ ಅಧಿಕಾರಿಗಳು / ಆರೋಗ್ಯ ನಿರೀಕ್ಷಕರು
2. ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಮಹಾನಗರ ಪಾಲಿಕೆ/ನಗರ ಸಭೆ/ಪುರಸಭೆ/ಪಟ್ಟಣ ಪಂಚಾಯತಿಯ ಕಂದಾಯ ಅಧಿಕಾರಿ/ಕಂದಾಯ ನಿರೀಕ್ಷಕರು.
3. ತಾಲ್ಲೂಕು ಮಟ್ಟದಲ್ಲಿ ಕಂದಾಯ ಇಲಾಖೆಯ ತಹಶೀಲ್ದಾರರು/ ಉಪ ತಹಶೀಲ್ದಾರರು/ಕಂದಾಯ ನಿರೀಕ್ಷಕರು/ ಕಂದಾಯ ಅಧಿಕಾರಿಗಳು.
4. ಕಾರ್ಮಿಕ ಇಲಾಖೆಯ ಸಹಾಯಕ ಕಾರ್ಮಿಕ ಆಯುಕ್ತರು / ಕಾರ್ಮಿಕ ಅಧಿಕಾರಿಗಳು / ಹಿರಿಯ ಕಾರ್ಮಿಕ ನಿರೀಕ್ಷಕರು/ ಕಾರ್ಮಿಕ ನಿರೀಕ್ಷಕರು/.
5. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ / ಕಾರ್ಯದರ್ಶಿ.

Scanned with CamSca

## II. ಪರಿಶೀಲನಾ ಪ್ರಾಧಿಕಾರಿ :

### 1. ಅರ್ಜಿ ಸಲ್ಲಿಕೆ:

ಫಲಾನುಭವಿಗಳು ಸೇವಾ ಸಿಂಧು ಪೋರ್ಟಲ್ ಮೂಲಕ ಸಲ್ಲಿಸಿರುವ ಎಲ್ಲಾ ಅರ್ಜಿಗಳು ಆಯಾ ಜಿಲ್ಲೆಗಳ ವ್ಯಾಪ್ತಿಯ ಜಿಲ್ಲಾಧಿಕಾರಿಗಳ ಲಾಗಿನ್‌ಗೆ ಹಾಗೂ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ 8 ವಲಯಗಳ ಜಂಟಿ ಆಯುಕ್ತರ ಲಾಗಿನ್‌ಗೆ ವರ್ಗಾಯಿಸಲಾಗುವುದು.

| ಕ್ರ.ಸಂ. | ವ್ಯಾಪ್ತಿ | ಅರ್ಜಿಗಳ ಸ್ವೀಕೃತಿ ಹಾಗೂ ಅಂತಿಮ ತೀರ್ಮಾನ ಕೈಗೊಳ್ಳುವ ಪ್ರಾಧಿಕಾರಿ ಅಧಿಕಾರಿಯ ಪದನಾಮ |
|---|---|---|
| 01 | ಜಿಲ್ಲಾ ಮಟ್ಟದಲ್ಲಿ | ಜಿಲ್ಲಾಧಿಕಾರಿಗಳು |
| 02 | ಬಿ.ಬಿ.ಎಂ.ಪಿ. | 08 ವಲಯದ ಜಂಟಿ ಆಯುಕ್ತರು. |

### 2.ಅನುಮೋದನೆ:

ಜಿಲ್ಲಾಡಳಿತ ಹಾಗೂ ಬಿ.ಬಿ.ಎಂ.ಪಿ. ವ್ಯಾಪ್ತಿಯ 8 ವಲಯಗಳ ಜಂಟಿ ಆಯುಕ್ತರಿಂದ ಸ್ವೀಕರಿಸಿದ ಅರ್ಜಿಗಳನ್ನು ಕ್ರಮ ಸಂಖ್ಯೆ 1(ಎಫ್) ರಲ್ಲಿ ನಮೂದಿಸಿರುವ ವಿವಿಧ ಇಲಾಖೆಗಳ ಅಧಿಕಾರಿಗಳು ನೀಡಿರುವ ಉದ್ಯೋಗ ದೃಢೀಕರಣದ ಆಧಾರದ ಮೇಲೆ ವೃತ್ತಿಯನ್ನು ನಿರ್ವಹಿಸುತ್ತಿರುವುದನ್ನು ನಿರ್ಣಯಿಸುವುದು ಹಾಗೂ ಅರ್ಜಿದಾರರು ಇತರೆ ಷರತ್ತುಗಳನ್ನು ಪೂರೈಸಿದಲ್ಲಿ ನೇರವಾಗಿ ಅರ್ಜಿಯನ್ನು ಅನುಮೋದಿಸುವುದು ಅಥವಾ ಅಗತ್ಯವಿದ್ದಲ್ಲಿ ಜಿಲ್ಲಾಧಿಕಾರಿಗಳ/ಬಿ.ಬಿ.ಎಂ.ಪಿ. ವ್ಯಾಪ್ತಿಯ 8 ವಲಯಗಳ ಜಂಟಿ ಆಯುಕ್ತರ ವಿವೇಚನೆಯ ಮೇರೆಗೆ ಎಸ್.ಓ.ಪಿಯ ಕ್ರಮ ಸಂಖ್ಯೆ 2(3)ಯಲ್ಲಿ ತಿಳಿಸಿರುವ ವಿವಿಧ ಇಲಾಖೆಗಳ ಪರಿಶೀಲನಾ ಅಧಿಕಾರಿಗಳ ಮುಖಾಂತರ ಪರಿಶೀಲಿಸಿ, ವರದಿಯ ಆಧಾರದ ಮೇಲೆ ಕ್ರಮವಹಿಸುವುದು.

ನಿಯಮಾನುಸಾರ ಪರವಾನಗಿ ಪಡೆದ ಸಂಸ್ಥೆಯಾಗಿದ್ದು 04ಕ್ಕಿಂತ ಹೆಚ್ಚು ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಲ್ಲಿ ಹಾಗೂ ಪರವಾನಿಗೆಯನ್ನು ಪಡೆಯದೇ ಕಾರ್ಯ ನಿರ್ವಹಿಸುವ ಸಂಸ್ಥೆಯಾಗಿದ್ದು 2 (ಎರಡು)ಕ್ಕಿಂತ ಹೆಚ್ಚು ಕಾರ್ಮಿಕರು ಕರ್ತವ್ಯ ನಿರ್ವಹಿಸುತ್ತಿದ್ದಲ್ಲಿ, ಸದರಿ ಸಂಸ್ಥೆಗೆ ಕಾರ್ಮಿಕ ಇಲಾಖೆ/ನಗರಾಭಿವೃದ್ಧಿ ಇಲಾಖೆ/ಗ್ರಾಮೀಣಾಭಿವೃದ್ಧಿ ಇಲಾಖೆ/ಬಿ.ಬಿ.ಎಂ.ಪಿಯ ಅಧಿಕಾರಿಗಳು ಬೇಟಿ ನೀಡಿ ಪರಿಶೀಲಿಸುವುದು ಹಾಗೂ ದೂರುಗಳು ಬಂದಲ್ಲಿ ಸ್ಥಳ ಬೇಟಿ ನೀಡಿ ನಿಯಾಮಾನುಸಾರ ಪರಿಶೀಲಿಸಿ, ವರದಿಯ ಆಧಾರದ ಮೇಲೆ ಕ್ರಮವಹಿಸುವುದು.

ನೈಜತೆಯ ಪರಿಶೀಲನೆಗಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರು ನಡೆಸಿರುವ ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆಯ ದತ್ತಾಂಶವನ್ನು ಪೂರಕ ದಾಖಲೆಯಾಗಿ ಪರಿಗಣಿಸಿ ಪರಿಶೀಲನೆ ನಡೆಸುವುದು.

Scanned with CamSca

3. **ಪರಿಶೀಲನಾ ಅಧಿಕಾರಿಗಳು:-**

a. ಕಾರ್ಮಿಕ ಇಲಾಖೆಯ ಜಿಲ್ಲಾ ಕಾರ್ಮಿಕ ಅಧಿಕಾರಿಗಳು, ಹಿರಿಯ ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ನಿರೀಕ್ಷಕರು,

b. ನಗರಾಭಿವೃದ್ಧಿ ಇಲಾಖೆಯ ಆಯುಕ್ತರು, ಮುಖ್ಯಾಧಿಕಾರಿಗಳು, ಕಂದಾಯ ಅಧಿಕಾರಿಗಳು, ಕಂದಾಯ ನಿರೀಕ್ಷಕರು,

c. ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಕಂದಾಯ ಅಧಿಕಾರಿ, ಕಂದಾಯ ನಿರೀಕ್ಷಕರು, ಹಿರಿಯ ಆರೋಗ್ಯಾಧಿಕಾರಿ, ಆರೋಗ್ಯ ನಿರೀಕ್ಷಕರು

d. ಗ್ರಾಮೀಣಾಭಿವೃದ್ಧಿ ಇಲಾಖೆಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು.

ಈ ಮೇಲ್ಕಂಡ ಅಧಿಕಾರಿಗಳು ಅರ್ಜಿಗಳ ಪರಿಶೀಲನೆಗಾಗಿ ಜಿಲ್ಲಾಧಿಕಾರಿಗಳು/ಬಿ.ಬಿ.ಎಂ.ಪಿಯ 08 ವಲಯಗಳ ಜಂಟಿ ಆಯುಕ್ತರುಗಳಿಗೆ ಅಗತ್ಯ ಸಹಕಾರ ಮತ್ತು ಸಹಯೋಗ ನೀಡುವುದು.

4.**ನೋಡಲ್ ಅಧಿಕಾರಿ:-**

ಯೋಜನೆಯ ಯಶಸ್ವಿ ಅನುಷ್ಠಾನಕ್ಕೆ ಜಿಲ್ಲಾಧಿಕಾರಿಗಳಿಗೆ ಎಲ್ಲಾ ಅಗತ್ಯ ಸಹಕಾರ ನೀಡಲು ಕಾರ್ಮಿಕ ಇಲಾಖೆಯ ಜಿಲ್ಲಾ ಕಾರ್ಮಿಕ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸುವುದು ಹಾಗೂ ಬಿ.ಬಿ.ಎಂ.ಪಿ ಮಟ್ಟದಲ್ಲಿ ಜಿಲ್ಲಾ ಕಾರ್ಮಿಕ ಅಧಿಕಾರಿಗಳು ಲಭ್ಯವಿಲ್ಲದಿದ್ದಲ್ಲಿ, ವ್ಯಾಪ್ತಿಯ ಹಿರಿಯ ಕಾರ್ಮಿಕ ನಿರೀಕ್ಷಕರನ್ನು ನೋಡಲ್ ಅಧಿಕಾರಿಯಾಗಿ ನೇಮಿಸುವುದು. ಇವರು ತುರ್ತಾಗಿ ಅರ್ಜಿಗಳ ವಿಲೇವಾರಿ ಹಾಗೂ ಪರಿಹಾರವನ್ನು ಒದಗಿಸಲು ವಿವಿಧ ಇಲಾಖೆಗಳ ಸಹಕಾರದೊಂದಿಗೆ ಅಗತ್ಯ ಕ್ರಮ ವಹಿಸುವುದು.

**III. ಸೇವಾ ಸಿಂಧು ಪೋರ್ಟಲ್‌ನಲ್ಲಿ ಅರ್ಜಿಯ ಪ್ರಕ್ರಿಯೆ.**

a. ಅರ್ಜಿದಾರರು ಅರ್ಜಿಯನ್ನು ಸೇವಾ ಸಿಂಧು ಪೋರ್ಟಲ್ ಮೂಲಕ ಮೇಲ್ಕಂಡ ದಾಖಲೆಗಳೊಂದಿಗೆ ಸಲ್ಲಿಸುವುದು.

b. ಅರ್ಜಿ ಸಲ್ಲಿಸಿದ ಪ್ರತಿ ಅರ್ಜಿದಾರರಿಗೆ ವಿಶಿಷ್ಠ ಗುರುತಿನ ಸಂಖ್ಯೆಯನ್ನು ಅರ್ಜಿದಾರರ ಮೊಬೈಲ್ ಸಂಖ್ಯೆಗೆ ಸಂದೇಶ ಕಳುಹಿಸುವುದು.

c. ನೋಂದಾಯಿತ ಅರ್ಜಿದಾರರು ವಿಶಿಷ್ಠ ಗುರುತಿನ ಸಂಖ್ಯೆಯನ್ನು ಬಳಸಿ ಸಲ್ಲಿಸಿದ ಅರ್ಜಿಯ ಸ್ಥಿತಿಯ ಕುರಿತು ಮಾಹಿತಿ ಪಡೆಯುವುದು.

d. ಸದರಿ ಅರ್ಜಿಯನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು/ಬಿ.ಬಿ.ಎಂ.ಪಿ 08 ವಲಯಗಳ ಜಂಟಿ ಆಯುಕ್ತರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸುವುದು.

e. ಅರ್ಜಿದಾರರು ಕೋವಿಡ್-19ರಡಿ ಕಟ್ಟಡ ಕಾರ್ಮಿಕರು, ಅಗಸರು ಮತ್ತು ಕ್ಷೌರಿಕರಿಗಾಗಿ ಘೋಷಿಸಲ್ಪಟ್ಟ ಪರಿಹಾರದಲ್ಲಿ ಯಾವುದಾದರೂ ನೆರವನ್ನು ಈಗಾಗಲೇ ಪಡೆದಿದ್ದಲ್ಲಿ, ಅಂತಹ ಕಾರ್ಮಿಕರನ್ನು ಅನರ್ಹರೆಂದು ಪರಿಗಣಿಸುವುದು. (ಆಧಾರ್ ಸಂಖ್ಯೆಯ ಆಧಾರದ ಮೇಲೆ ಖಚಿತಪಡಿಸಿಕೊಳ್ಳುವುದು ಕಡ್ಡಾಯ) (ಇ-ಆಡಳಿತ ಇಲಾಖೆ/ಸೇವಾ ಸಿಂಧು ಈ ಕುರಿತು ಕ್ರಮ ವಹಿಸುವುದು).

Scanned with CamSca

f. ಸೂಕ್ತ ಪರಿಶೀಲನೆಯ ನಂತರ ಅರ್ಹ ಫಲಾನುಭವಿಗಳ ಅರ್ಜಿಗಳನ್ನು ಆನ್‌ಲೈನ್ ಅಲ್ಲಿ ಅನುಮೋದಿಸುವುದು ಹಾಗೂ ಕಾಲಕಾಲಕ್ಕೆ ವರದಿಯನ್ನು ಕಾರ್ಮಿಕ ಇಲಾಖೆಗೆ ಕಳುಹಿಸುವುದು.

g. ಅನರ್ಹರೆಂದು ಕಂಡುಬಂದಲ್ಲಿ, ಸೂಕ್ತ ಕಾರಣಗಳೊಂದಿಗೆ ಅರ್ಜಿಯನ್ನು ತಿರಸ್ಕರಿಸುವುದು ಹಾಗೂ ಸದರಿ ಮಾಹಿತಿಯನ್ನು ಅರ್ಜಿದಾರರ ಮೊಬೈಲ್ ಸಂಖ್ಯೆಗೆ ರವಾನಿಸುವುದು.

h. ತಿರಸ್ಕರಿಸಿರುವ ಅರ್ಜಿಗಳ ಕುರಿತು ಫಲಾನುಭವಿಗಳು ಸಲ್ಲಿಸುವ ಆಕ್ಷೇಪಗಳ ಕುರಿತು ಜಿಲ್ಲಾಧಿಕಾರಿಗಳು/ಬಿ.ಬಿ.ಎಂ.ಪಿ 08 ವಲಯಗಳ ಜಂಟಿ ಆಯುಕ್ತರು ನಿರ್ಣಯ ಕೈಗೊಳ್ಳುವುದು.

i. ಜಿಲ್ಲಾಧಿಕಾರಿಗಳು/ಬಿ.ಬಿ.ಎಂ.ಪಿ 08 ವಲಯಗಳ ಜಂಟಿ ಆಯುಕ್ತರು ಸಲ್ಲಿಸುವ ವರದಿಯ ಆಧಾರದ ಮೇಲೆ ಕಾರ್ಮಿಕ ಇಲಾಖೆಯು ನೆರವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ಆಧಾರ್ ಆಧಾರಿತ ಡಿ.ಬಿ.ಟಿ ಮೂಲಕ ವರ್ಗಾಯಿಸುವುದು.

j.

## IV. ಜಿಲ್ಲಾ ಮಟ್ಟದ ಸಮಿತಿ ಹಾಗೂ ಬಿ.ಬಿ.ಎಂ.ಪಿ ಮಟ್ಟದ ಸಮಿತಿ:

**ಜಿಲ್ಲಾ ಮಟ್ಟದ ಸಮಿತಿ.**

| ಕ್ರ.ಸಂ. | ಅಧಿಕಾರಿಗಳು | ಪದನಾಮ |
|---|---|---|
| 01 | ಜಿಲ್ಲಾಧಿಕಾರಿಗಳು. | ಅಧ್ಯಕ್ಷರು |
| 02 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್. | ಉಪಾಧ್ಯಕ್ಷರು |
| 03 | ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ. | ಸದಸ್ಯರು |
| 04 | ಜಂಟಿ ನಿರ್ದೇಶಕರು/ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ. | ಸದಸ್ಯರು |
| 05 | ಆಯುಕ್ತರು/ಮುಖ್ಯಾಧಿಕಾರಿಗಳು, ಮಹಾನಗರ ಪಾಲಿಕೆ/ನಗರ ಪಾಲಿಕೆ/ನಗರ ಸಭೆ/ಪುರಸಭೆ/ಪಟ್ಟಣ ಪಂಚಾಯತಿ. | ಸದಸ್ಯರು. |
| 06 | ಇ–ಆಡಳಿತ ಇಲಾಖೆ/ಸೇವಾ ಸಿಂಧುಗೆ ಸಂಬಂಧಿಸಿದ ಜಿಲ್ಲಾ ಮಟ್ಟದ ಅಧಿಕಾರಿ. | ಸದಸ್ಯರು |
| 07 | ನಿಗದಿಪಡಿಸಿದ ವೃತ್ತಿಯ ಕಾರ್ಮಿಕ ಸಂಘ/ಸಂಘಟನೆಯ ಸ್ಥಳೀಯ ಪ್ರತಿನಿಧಿ. (ಅಗಸರು ಮತ್ತು ಕ್ಷೌರಿಕ ವರ್ಗದಿಂದ ತಲಾ ಒಬ್ಬರು). | ಸದಸ್ಯರು. |
| 08 | ಜಿಲ್ಲಾ ವಾರ್ತಾ ಮತ್ತು ಪ್ರಚಾರ ಅಧಿಕಾರಿಗಳು. | ಸದಸ್ಯರು |
| 09 | ಜಿಲ್ಲಾಧಿಕಾರಿಗಳು/ಅಧ್ಯಕ್ಷರ ವಿವೇಚನೆ ಮೇರೆಗೆ ಆಯ್ಕೆ ಮಾಡಿದ ಗರಿಷ್ಠ ಇಬ್ಬರು ಸದಸ್ಯರು. | ಸದಸ್ಯರು |
| 10 | ಕಾರ್ಮಿಕ ಅಧಿಕಾರಿಗಳು, ಕಾರ್ಮಿಕ ಇಲಾಖೆ. | ಸದಸ್ಯ ಕಾರ್ಯದರ್ಶಿ |

**ಬಿ.ಬಿ.ಎಂ.ಪಿ ಮಟ್ಟದ ಸಮಿತಿ**

| ಕ್ರ.ಸಂ. | ಅಧಿಕಾರಿಗಳು | ಪದನಾಮ |
|---|---|---|
| 01 | ಆಯುಕ್ತರು, ಬಿ.ಬಿ.ಎಂ.ಪಿ. ಅಥವಾ ನಾಮನಿರ್ದೇಶಿತ ಅಧಿಕಾರಿಗಳು. | ಅಧ್ಯಕ್ಷರು |
| 02 | ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ. | ಉಪಾಧ್ಯಕ್ಷರು |
| 03 | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ. | ಸದಸ್ಯರು |
| 04 | 8 ವಲಯಗಳ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ, ಬೆಂಗಳೂರು | ಸದಸ್ಯರು |
| 05 | ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ. | ಸದಸ್ಯರು |

Scanned with CamSca

| | | |
|---|---|---|
| 06 | ಇ-ಆಡಳಿತ ಇಲಾಖೆ/ಸೇವಾ ಸಿಂಧುಗೆ ಸಂಬಂಧಿಸಿದ ಅಧಿಕಾರಿ. | ಸದಸ್ಯರು |
| 07 | ನಿಗದಿಪಡಿಸಿದ ವೃತ್ತಿಯ ಕಾರ್ಮಿಕ ಸಂಘ/ಸಂಘಟನೆಯ ಜಿಲ್ಲಾ ಮಟ್ಟದ ಅಧ್ಯಕ್ಷರು/ಅಧಿಕೃತ ಪ್ರತಿನಿಧಿ (ಅಗಸರು ಮತ್ತು ಕ್ಷೌರಿಕ ವರ್ಗದಿಂದ ತಲಾ ಒಬ್ಬರು). | ಸದಸ್ಯರು |
| 08 | ಜಿಲ್ಲಾ ವಾರ್ತಾ ಮತ್ತು ಪ್ರಚಾರ ಅಧಿಕಾರಿಗಳು. | ಸದಸ್ಯರು |
| 09 | ಅಧ್ಯಕ್ಷರ ವಿವೇಚನೆ ಮೇರೆಗೆ ಆಯ್ಕೆ ಮಾಡಿದ ಗರಿಷ್ಠ ಇಬ್ಬರು ಸದಸ್ಯರು. | ಸದಸ್ಯರು |
| 10 | ಸಂಬಂಧಿಸಿದ ವಿಭಾಗಗಳ ಕಾರ್ಮಿಕ ಅಧಿಕಾರಿಗಳು, ಕಾರ್ಮಿಕ ಇಲಾಖೆ. | ಸದಸ್ಯ ಕಾರ್ಯದರ್ಶಿ |

ಈ ಮೇಲ್ಕಂಡ ಸಮಿತಿಯು ಘೋಷಿಸಿದ ನೆರವಿನ ಪಾವತಿಯ ಪ್ರಗತಿ ಪರಿಶೀಲನೆ, ಸಮನ್ವಯ ಸಾಧಿಸಲು, ಪ್ರಚಾರ, ದೂರು ಅರ್ಜಿಗಳ ವಿಲೇವಾರಿ ಹಾಗೂ ಸರ್ಕಾರಕ್ಕೆ ನಿಗದಿತ ಅವಧಿಯಲ್ಲಿ ವರದಿ ಸಲ್ಲಿಕೆ ಕುರಿತು ಕಾಲ-ಕಾಲಕ್ಕೆ ಸಭೆ ಸೇರಿ ನಿರ್ಣಯ ಕೈಗೊಳ್ಳುವುದು.

## V. ಅನುದಾನ:

ಸನ್ಮಾನ್ಯ ಮುಖ್ಯ ಮಂತ್ರಿಗಳು ಘೋಷಿಸಿದಂತೆ ತಗಲಬಹುದಾದ ಅಂದಾಜು ವೆಚ್ಚ ಈ ಕೆಳಕಂಡಂತಿದೆ

| ಕ್ರ.ಸಂ. | ವಿವರ | ಮೊತ್ತ (ಕೋಟಿ ರೂಗಳಲ್ಲಿ) |
|---|---|---|
| 01 | 60,000 ಅಗಸರು ಹಾಗೂ 2,30,000 ಕ್ಷೌರಿಕ ವೃತ್ತಿಯಲ್ಲಿ ತೊಡಗಿರುವ ಅಸಂಘಟಿತ ವಲಯದ ಕಾರ್ಮಿಕರಿಗೆ ಒಂದು ಬಾರಿ ಪರಿಹಾರವಾಗಿ ರೂ.5000/- | 145.00 |
| | ಒಟ್ಟು ಮೊತ್ತ | 145.00 |

## VI. ವರದಿ :

ಎ. ಜಿಲ್ಲಾಧಿಕಾರಿಗಳು/ಬಿ.ಬಿ.ಎಂ.ಪಿ. ವ್ಯಾಪ್ತಿಯ 8 ವಲಯಗಳ ಜಂಟಿ ಆಯುಕ್ತರು ಅರ್ಹ ಫಲಾನುಭವಿಗಳ ಕ್ರೋಢಿಕೃತ ವರದಿಯನ್ನು ಕಾಲಕಾಲಕ್ಕೆ ಕಾರ್ಮಿಕ ಇಲಾಖೆಗೆ ಸಲ್ಲಿಸುವುದು.

ಬಿ. ಕಾರ್ಮಿಕ ಇಲಾಖೆ/ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಿಲ್ಲಾಧಿಕಾರಿಗಳು/ಬಿ.ಬಿ.ಎಂ.ಪಿ. ವ್ಯಾಪ್ತಿಯ 8 ವಲಯಗಳ ಜಂಟಿ ಆಯುಕ್ತರು ಸಲ್ಲಿಸುವ ಅರ್ಹ ಫಲಾನುಭವಿಗಳ ವಿವರಗಳ ಆಧಾರದ ಮೇಲೆ ಪರಿಹಾರ ಧನವನ್ನು ಇ-ಆಡಳಿತ ಇಲಾಖೆಯ ಪೋರ್ಟಲ್ ಮೂಲಕ ಆಧಾರ್ ಆಧಾರಿತ ಡಿಬಿಟಿ ಮೂಲಕ ಫಲಾನುಭವಿಗಳಿಗೆ ಪರಿಹಾರ ಧನವನ್ನು ವಿತರಿಸುವುದು. ಮಂಡಳಿಯು ಉದ್ದೇಶಕ್ಕಾಗಿ ಪ್ರತ್ಯೇಕವಾಗಿ ಬ್ಯಾಂಕ್ ಖಾತೆ ತೆರೆದು ವ್ಯವಹರಿಸುವುದು.

ಕೆ. ವಿದ್ಯಾ [signature]
ಸರ್ಕಾರದ ಉಪ ಕಾರ್ಯದರ್ಶಿ
ಕಾರ್ಮಿಕ ಇಲಾಖೆ.

Scanned with CamSca